

## ಚಾಲಕ ಗರಂ; ಗಾಯಕ ಗಾಬರಿ!

ಹಿಂದೂಸ್ತಾನಿ ಕಲಾವಿದರಿಗೆ 'ಕರ್ಜ್' ಪ್ರಾಕ್ಟೀಸ್ ಮಾಡುವುದು ಒಂದು ರೂಢಿ. ಕರ್ಜ್ ಎಂದರೆ ಮಂದ್ರ ಷಡ್ಜದಲ್ಲಿ ಅಭ್ಯಾಸ ಮಾಡುವುದು. ತ್ರಿಸ್ಥಾಯಿಯಲ್ಲಿ ಅಭ್ಯಾಸ ಮಾಡಿದರೆ ಸಂಗೀತ ಚೆನ್ನಾಗಿ ಬರ್ತದ ಅಂತ. ಒಬ್ಬ ಹೆಸರಾಂತ ಕಲಾವಿದರು ಒಮ್ಮೆ ಧಾರವಾಡದಲ್ಲಿ ತಂಬೂರಿ ಸಮೇತ ಸರ್ಕಾರಿ ಬಸ್ ಹತ್ತಿದರು. ಚಾಲಕನ ಸೀಟಿನ ಹಿಂದೆ ಕಂಬಿಗೆ ತಂಬೂರಿ ಕಟ್ಟಿ ಕೂತಿದ್ದರು. ಇನ್ನೇನು ಗಾಡಿ ಹೊರಡಬೇಕು ಎನ್ನುವ ಮುಂಚೆ ಚಾಲಕ ಒಮ್ಮೆ ಸ್ಟಾರ್ಟ್ ಮಾಡಿ ಸ್ವಲ್ಪ ಮುಂದೆ ಚಲಾಯಿಸಿ ಒಂದು ಸಣ್ಣ ಸುತ್ತು ಬಂದು ಟೆಸ್ಟ್ ಮಾಡ್ತಾನೆ, ಎಲ್ಲ ಸರಿ ಇದೆಯಾ ಎಂದು. ಆಗ ಈ ಕಲಾವಿದ ತಂಬೂರಿಯನ್ನು ಕರ್ಜ್ ಶ್ರುತಿ ಇಟ್ಟುಕೊಂಡು ಬಸ್‌ನಲ್ಲಿ ಪ್ರಾಕ್ಟೀಸ್ ಮಾಡ್ತಾ ಇರ್ತಾರೆ. ಗಾಡಿ ಹೊರಡುವ ಶಬ್ದವನ್ನೂ ಆಧಾರ ಷಡ್ಜ ಮಾಡಿ ಆತ ಪ್ರಾಕ್ಟೀಸ್ ಮಾಡಿದ್ದು. ಆಗ ಚಾಲಕನಿಗೆ ಈ ವಿಷಯ ಗೊತ್ತಾಗದೇ ಗಾಡಿಯಲ್ಲೇ ಏನೋ ಬೇರೆ ಶಬ್ದ ಬರ್ತಿದೆಯಲ್ಲ ಎಂದುಕೊಂಡು ಎರಡು ಮೂರು ಬಾರಿ ಗಾಡಿಯನ್ನು ಮುಂದೆ ಹಿಂದೆ ಕೊಂಡೊಯ್ದು ಟೆಸ್ಟ್ ಮಾಡ್ತಾನೆ. ಆಮೇಲೆ ಆತನಿಗೆ ಗೊತ್ತಾಯಿತು. ಈ ಶಬ್ದ ಗಾಡಿಯಿಂದ ಬಂದದ್ದಲ್ಲ ಅಂತ. ಚಾಲಕನಿಗೆ ಫಜೀತಿಗಿಟ್ಟುಕೊಂಡಿತು, ಈ ತಂಬೂರಿ ಶಬ್ದದಿಂದ ಗಾಡಿ ಹೊರಡೋದು ಲೇಟಾಯಿತು ಅಂತ ಕೋಪವೂ ಬಂತು. ಕಲಾವಿದನಿಗೆ ಗಾಬರಿಯಾದರೆ ಉಳಿದ ಪ್ರಯಾಣಿಕರಿಗೆ ಇದೊಂದು ಹಾಸ್ಯ ಎನಿಸಿಬಿಟ್ಟಿತ್ತು. ಇದು ನೈಜ ಘಟನೆ.

***

## ಶ್ರುತಿ ಎಷ್ಟು?

ಆಕಾಶವಾಣಿಯಲ್ಲಿ 27 ವರ್ಷ ಸೇವೆ ಸಲ್ಲಿಸಿದ್ದೆ. ಈ ಕಾಲಘಟ್ಟದಲ್ಲಿ ಸಂಗೀತದಲ್ಲಿ ಅನೇಕ ಬಾರಿ ಹಾಸ್ಯವನ್ನು ನೋಡಿದ್ದೇನೆ. ಆಕಾಶವಾಣಿಗೆ ಹೆಸರಾಂತ ಕಲಾವಿದರೂ ಬರೋರು. ಹವ್ಯಾಸಿ ಕಲಾವಿದರೂ ಬರೋರು. ಆಡಿಷನ್‌ಗೆ ಹಾಡಲು, ಯುವವಾಣಿಗೆ ಎಲ್ಲ ಹಾಡೋದಕ್ಕೆ ಬರೋರು. ಯಾರು ಹೇಗೇ ಹಾಡಿದರೂ ನಾವು ನಗಬಾರದು ಎಂಬ ಸೂಚನೆ ನಮಗೆ ಇತ್ತು. ಯಾರೇ ಹಾಡುಗಾರರು ಬಂದರೂ ನಾವು ಸಾಥಿ ಕೊಡಬೇಕಾಗಿತ್ತು. ಆಗ ನಾವು 'ನಿಮ್ಮ ಶ್ರುತಿ (pitch) ಎಷ್ಟು' ಅಂತ ಕೇಳ್ತಾ ಇದ್ವಿ. ಆಗ ಅವರು 'ಇಟ್ಕೊಳ್ರಿ ಏಳೋ ಎಂಟೋ...' ಎನ್ನೋರು, ನಮಗೆ ನಗು ಬರೋದು. ಸಂಗೀತದಲ್ಲಿ ಶ್ರುತಿ ಎಂದರೆ ಎ ಸ್ಕೇಲ್, ಬಿ ಸ್ಕೇಲ್, ಸಿ ಸ್ಕೇಲ್... ಹೀಗೆ ಗಾಯಕರ ಕಂಠಕ್ಕೆ ಆಧರಿಸಿ ಹಾಡುವರು. ಆದರೆ ಶ್ರುತಿ ಜ್ಞಾನ ಇಲ್ಲದವರು ಏಳೋ ಎಂಟೋ ಶ್ರುತಿ ಇಟ್ಕೊಳ್ಳಿ ಎಂದಾಗ ನಮಗೆ ಬಹಳ ಹಾಸ್ಯಾಸ್ಪದ ಎನಿಸೋದು.

—ಪಂ. ರವೀಂದ್ರ ಯಾವಗಲ್, ತಬಲಾ ಕಲಾವಿದರು

## ವೈದ್ಯ ತರಗತಿಯಲ್ಲೊಂದು ಹಾಸ್ಯ ಪ್ರಸಂಗ

ಸದಾ ಸಾವು ನೋವಿನ ಮಧ್ಯೆ ನರಳಾಡುವ ರೋಗಿಗಳ ಮಧ್ಯೆ ಕರ್ತವ್ಯ ನಿರ್ವಹಿಸುವ ವೈದ್ಯರಲ್ಲಿ ಹಾಸ್ಯಪ್ರಜ್ಞೆ ಇರುವುದಿಲ್ಲ ಎಂಬುದು ಅನೇಕರ ಭಾವನೆ.

ನಾನು ಎಂಬಿಬಿಎಸ್ ಓದುವಾಗ ಒಬ್ಬ ಹುಡುಗ **dissecton hall**ನಲ್ಲಿ ಹೆಣ ನೋಡಿ ಹೆದರಿ ಓಡಿ ಹೋದ. ಇನ್ನೊಬ್ಬ ಬುದ್ಧಿವಂತ ಹುಡುಗ **physiology practicals**ನಲ್ಲಿ ಕಪ್ಪೆಯನ್ನು **dissect** ಮಾಡಿ ಅದರ ಹೃದಯ ತೆಗೆದು ಸ್ಮೋಕ್ ಡ್ರಮ್‌ಗೆ ಕಟ್ಟಿ, ಅದರ ಮಿಡಿತದ ಗ್ರಾಫ್ ರೆಕಾರ್ಡ್ ಮಾಡಬೇಕಿತ್ತು. ಏನು ಹೇಗೆ ಮಾಡಬೇಕು ಎಂದು ಗೊತ್ತಾಗದೆ ಆ ಹುಡುಗ ಗಾಬರಿಯಾಗಿ ನಿಂತುಬಿಟ್ಟ. ಆಗ ಲೆಕ್ಚರರ್ ಅವನನ್ನು ನೋಡಿ, 'ಯಾಕೆ ಹಾಗೇ ನಿಂತುಬಿಟ್ಟೆ? ಅದನ್ನು ಡ್ರಮ್‌ಗೆ ಕಟ್ಟು' ಎಂದು ಹೇಳಲಿಕ್ಕೆ ಹೋಗಿ 'ಕಟ್ಟು ಐ ಸೇ' ಎಂದರು. ಅವರಿಗೆ ಯಾವಾಗಲೂ ಕನ್ನಡ ಪದ ಹೇಳಿ ಆದ ಮೇಲೆ 'ಐ ಸೇ' ಎಂದು ಇಂಗ್ಲಿಷ್‌ನಲ್ಲಿ ಹೇಳುವ ಅಭ್ಯಾಸ. ಅವರ ಮಾತನ್ನು ಕೇಳಿಸಿಕೊಂಡ ಹುಡುಗ ಕತ್ತರಿ ತೆಗೆದುಕೊಂಡು ಕಪ್ಪೆಯನ್ನು ಕತ್ತರಿಸಿ ಹಾಕಿದ.




ಕಪ್ಪೆಯನ್ನು ದಾರದಿಂದ ಕಟ್ಟಿ ಮಿಡಿಯುವ ಹೃದಯ ನೋಡಬೇಕಿತ್ತು. ಹೃದಯವನ್ನು ಕತ್ತರಿಸಿದರೆ ಅದು ಮಿಡಿಯುವುದೇ ಇಲ್ಲ. ಹೀಗಾಗಿ ಆ ಪ್ರಯೋಗ ಕೆಟ್ಟುಹೋಯಿತು. ಕನ್ನಡದ 'ಕಟ್ಟು' ಪದವನ್ನು ಇಂಗ್ಲಿಷ್‌ನ 'ಕಟ್' ಆಗಿ ಕೇಳಿಸಿಕೊಂಡ ಪರಿಣಾಮ ಆ ದಿನ ಎಕ್ಸ್‌ಪರಿಮೆಂಟ್ ಹಾಳಾಗಿ ಹೋಗಲು ಕಾರಣವಾಯಿತು. ಹುಡುಗ ಇಂಗು ತಿಂದ ಮಂಗನಂತೆ ನೋಡುತ್ತಾ ನಿಂತರೆ, ಉಳಿದವರೆಲ್ಲ ಗೊಳ್ ಎಂದು ನಗಲಾರಂಭಿಸಿದರು.

—ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಹೃದ್ರೋಗ ತಜ್ಞೆ

## ಹಾಗಾದರೆ ಚರ್ಚ್‌ಗೆ ಕಳಿಸಿ...

ವಿಕ್ಟೋರಿಯಾ ಆಸ್ಪತ್ರೆಯಲ್ಲಿ 'ಹೌಸ್‌ಮನ್ ಶಿಪ್' ಕೆಲಸ ಮಾಡುತ್ತಿದ್ದ ದಿನಗಳು. ಒಂದು ದಿನ ಒಬ್ಬ ರೋಗಿ ಬಂದರು. ಅವರನ್ನು ನನ್ನ ಗೆಳೆಯ ಪರೀಕ್ಷೆ ಮಾಡಿದ. ನಂತರ ಅದರ ವಿವರವನ್ನೆಲ್ಲ ಚೀಟಿಯಲ್ಲಿ ಬರೆದು ಅದನ್ನು ನಮ್ಮ ಪ್ರೊಫೆಸರ್ ಅವರಿಗೆ ತೋರಿಸಲು ಕಳಿಸಿಕೊಟ್ಟ. ಪರೀಕ್ಷೆಯ ನಂತರ ರೋಗದ ಬಗ್ಗೆ ನಮ್ಮ ಅನಿಸಿಕೆ ಬರೆದು, ಮುಂದೆ ಯಾವ ರೀತಿಯ ಚಿಕಿತ್ಸೆ ನೀಡಬಹುದು ಎನ್ನುವ ವಿವರವನ್ನು ತಿಳಿಸುವುದು ನಮ್ಮ ಕೆಲಸ ಆಗಿತ್ತು. ಅದರಂತೆ ವಿವರವನ್ನು ಬರೆದು, 'ಹೋಗಪ್ಪ, ಪಕ್ಕದ ರೂಮಿನಲ್ಲಿ ಪ್ರೊಫೆಸರ್ ಇದ್ದಾರೆ, ಇದನ್ನು ಅವರಿಗೆ ತೋರಿಸು' ಎಂದು ರೋಗಿಯ ಕೈಗೆ ಚೀಟಿಯನ್ನು ಕೊಟ್ಟ. ರೋಗಿ ಅದನ್ನು ಪ್ರಾಧ್ಯಾಪಕರಿಗೆ ಕೊಟ್ಟ. ಅದನ್ನು ನೋಡಿದ ನಮ್ಮ ಗುರುಗಳು, ಅದೇ ಚೀಟಿಯಲ್ಲಿ ತಮ್ಮ ಟಿಪ್ಪಣಿಯನ್ನು ಬರೆದು ಅದೇ ರೋಗಿಗೆ ಕೊಟ್ಟು 'ನಿನಗೆ ಈ ಚೀಟಿ ಕೊಟ್ಟವರಿಗೆ ತೋರಿಸು' ಎಂದು ಹೇಳಿ ಕಳಿಸಿದರು.



ಚೀಟಿಯನ್ನು ಕೊಟ್ಟ ತಕ್ಷಣ ನನ್ನ ಗೆಳೆಯ ಕಕ್ಕಾಬಿಕ್ಕಿಯಾದ. ಏಕೆಂದರೆ ಅದರಲ್ಲಿ ಪ್ರೊಫೆಸರ್ — **'Please refer him to church'** ಎಂದು ಬರೆದಿದ್ದರು. ಅವನ ಪರಿಸ್ಥಿತಿ ನೋಡಿ ನಮಗೂ ಗಡಿಬಿಡಿಯಾಯಿತು. ಏನಾಗಿದೆ ಎಂದು ನೋಡಿದಾಗಲೇ ಆಗಿರುವ ಎಡವಟ್ಟು ಗೊತ್ತಾಯಿತು. ರೋಗಿಯ ಅಂಗಾಲಿನಲ್ಲಿ ಹುಣ್ಣಾಗಿತ್ತು. ತುಂಬ ದೊಡ್ಡ ಪ್ರಮಾಣದ್ದು ಹುಣ್ಣದು. ಪರೀಕ್ಷಿಸಿದ ತರಬೇತಿ ವೈದ್ಯ ರೋಗನಿದಾನ (ಡಯಾಗ್ನೋಸಿಸ್) ಬರೆಯುವಾಗ **'Wound in the Soul'** ಎಂದು ಬರೆದಿದ್ದ. **Soul** ಎಂದು ಬರೆದಿದ್ದು ತಪ್ಪಾಗಿತ್ತು. **Soul** ಎಂದರೆ ಆತ್ಮ. ಅಂಗಾಲು ಎನ್ನಲು ಇಂಗ್ಲಿಷ್‌ನಲ್ಲಿ **sole** ಎನ್ನುತ್ತಾರೆ. ಆತ್ಮದ ಬಗ್ಗೆ ಕ್ರೈಸ್ತ ಧರ್ಮದಲ್ಲಿ ಹೆಚ್ಚು ಮಾತನಾಡುವ ಕಾರಣಕ್ಕೆ ನಮ್ಮ ಗುರುಗಳು ಹಾಗೆ ಬರೆದಿದ್ದರು. ಅದರ ಹಿಂದಿನ ಆಶಯ, ನಿನ್ನ ಕಾಗುಣಿತ ದೋಷವನ್ನು ತಿದ್ದಿಕೊಳ್ಳಬೇಕು ಎನ್ನುವ ಸೂಕ್ಷ್ಮವನ್ನು ಹೀಗೆ ಹೇಳಿದ್ದರು. ಅವತ್ತು ಗೆಳೆಯ ನಗೆಪಾಟಲಿಗೆ ತುತ್ತಾದ ಸನ್ನಿವೇಶ ಯಾವತ್ತೂ ನೆನಪಿನಲ್ಲಿ ಇರುತ್ತದೆ. ಈಗಲೂ ನಗು ಬಂದರೂ ಅದು ನಮಗೆ ಜೀವಮಾನದ ಪಾಠವನ್ನೂ ಕಲಿಸಿದೆ ಎನ್ನುವುದು ಅರ್ಥವಾಗುತ್ತದೆ.

—ಡಾ. ನಾ. ಸೋಮೇಶ್ವರ, ವೈದ್ಯರು, ಕಿರುತೆರೆ ನಿರೂಪಕರು